# ಕಾರ್ಡ್ ಬಳಸುವಾಗ ಎಚ್ಚರವಿರಲಿ



ಬ್ಯಾಂಕ್‌ಗಳು ಕೈಗೊಂಡಿರುವ ಭದ್ರತಾ ಕ್ರಮಗಳು ಎಷ್ಟೇ ಬಿಗಿಯಾಗಿರಲಿ, ಗ್ರಾಹಕರು ಕಾರ್ಡ್ ಬಳಕೆಯಲ್ಲಿ ಎಚ್ಚರ ವಹಿಸಬೇಕಾದ ಅಗತ್ಯ ಈಗ ಹಿಂದೆಂದಿಗಿಂತ ಹೆಚ್ಚಿದೆ. ಈಗ ಕಿ.ಮೀ ಗೆ ಒಂದರಂತೆ ಎಟಿಎಂ ಗಳು ಸಿಗುತ್ತಿವೆ. ನಗರಗಳಲ್ಲಿ ಫರ್ಲಾಂಗ್ ದೂರದಲ್ಲೇ ೨–೩ ಎಟಿಎಂ ಗಳು ಸಿಗುತ್ತವೆ. ಜನ ಅವಸರದಲ್ಲಿ ಇರುವಾಗಲೇ ಹೆಚ್ಚು ಎಟಿಎಂ ಕಾರ್ಡ್‌ಗಳನ್ನು ಬಳಸುವುದು. ನಗರ ಜೀವನ ಎಂದರೆ ಅವಸರ ಅಲ್ಲದೆ ಇನ್ನೇನು? ಈ ಕೆಳಗಿನ ಸೂಚನೆಗಳತ್ತ ಗಮನ ಹರಿಸಿ:

- ಓಪನ್ ಎಟಿಎಂ ಗಳಲ್ಲಿ ಮತ್ತು ಪಿಒಎಸ್ ಟರ್ಮಿನಲ್‌ಗಳಲ್ಲಿ ಡಾಟಾ ಕಳವು ಮಾಡುವ ವಂಚಕರ ಬಗ್ಗೆ ಹುಷಾರಾಗಿರಿ. ಇಣುಕಿ ನೋಡುವ ಅಥವಾ ಸಹಾಯ ಮಾಡುವ ನೆಪದಲ್ಲಿ ಪಿನ್ ಕಳವು ಮಾಡುವವರಿದ್ದಾರೆ. ಬ್ಯಾಂಕ್ ಸಿಬ್ಬಂದಿಯಂತೆ ನಟಿಸಿ ವಿವರಗಳನ್ನು ಪಡೆಯುವವರೂ ಇದ್ದಾರೆ. ಮುಖ್ಯವಾಗಿ ಎಟಿಎಂ ಒಳಗೆ ಹೋದಾಗ ಇನ್ನೊಬ್ಬರು ಒಳಗೆ ಬರದಂತೆ ನೋಡಿಕೊಳ್ಳಿ.
- ಪಿನ್ ಒತ್ತುವಾಗ ಕೀಬೋರ್ಡ್ ಮೇಲೆ ಹಸ್ತವನ್ನು ಅಡ್ಡ ಇಡುವುದು ಒಳ್ಳೆಯದು. ನಿಮ್ಮ ಗಮನಕ್ಕೆ ಬರದಂತೆ ಕ್ಲೋನಿಂಗ್ ಯತ್ನಗಳಿದ್ದಲ್ಲಿ ಇದು ತಡೆಯುತ್ತದೆ.
- ಆಗಾಗ್ಗೆ ನಿಮ್ಮ ಪಿನ್ ನಂಬರ್‌ಗಳನ್ನು ಬದಲಿಸಿ ಎಂದು ಬ್ಯಾಂಕ್‌ಗಳು ಗ್ರಾಹಕರಿಗೆ ಸೂಚನೆಗಳನ್ನು ನೀಡುತ್ತವೆ. ಆದರೆ ನೆನಪಿಡಿ– ನಿಮ್ಮ ಪಿನ್ ನಂಬರ್ ಮತ್ತು ಕಾರ್ಡ್ ವಿವರಗಳನ್ನು ಕೇಳಿ ಬ್ಯಾಂಕಿನ ಸಿಬ್ಬಂದಿ ಯಾವತ್ತೂ ಫೋನ್ ಮಾಡುವುದಿಲ್ಲ.
- ಯಾರಾದರೂ ಬ್ಯಾಂಕ್ ಸಿಬ್ಬಂದಿ ಎಂದು ಫೋನ್ ಮಾಡಿ ನಿಮ್ಮ ಕಾರ್ಡ್ ವಿವರಗಳನ್ನು ಕನ್ಫರ್ಮ್ ಮಾಡುತ್ತೇವೆ ಎಂದರೂ ನಂಬಬೇಡಿ.
- ಎಟಿಎಂ ಒಳಗೆ ಯಾವುದೇ ಅನುಮಾನಾಸ್ಪದ ವಸ್ತುಗಳು ಕಂಡು ಬಂದರೂ ಭದ್ರತಾ ಸಿಬ್ಬಂದಿ ಅಥವಾ ಬ್ಯಾಂಕ್ ಸಿಬ್ಬಂದಿಗೆ ಮಾಹಿತಿ ನೀಡಿ.
- ಕಡಿಮೆ ಬೆಳಕು ಇರುವ, ಮೂಲೆಯಲ್ಲಿರುವ ಎಟಿಎಂ ಗಳನ್ನು ಹೆಚ್ಚು ಬಳಸಬೇಡಿ. ಹಣ ಬರದಿದ್ದರೆ ಅಥವಾ ಸ್ಲಿಪ್ ಬರದಿದ್ದರೆ ಹೊರಗೆ ಇರುವ ಸಿಬ್ಬಂದಿಯ ನೆರವು ಕೇಳಿ. ಅಲ್ಲೊಂದು ಕಂಪ್ಲೇಂಟ್ ಬುಕ್ ಇರುತ್ತದೆ, ಅದರಲ್ಲಿ ದಾಖಲಿಸಿ. ಸಾಧ್ಯವಾದರೆ ದೂರು ನೀಡಿದ್ದಕ್ಕೆ ರಶೀತಿ ಪಡೆಯಿರಿ.
- ಸಾಧ್ಯವಾದಷ್ಟು ನಿಮ್ಮದೇ ಬ್ಯಾಂಕಿನ ಎಟಿಎಂ ಬಳಸಿ. ಒಂದೇ ಕ್ಯಾಶ್‌ಟ್ರೇ ಒಳಗೆ ಬರುವ ಬ್ಯಾಂಕ್‌ಗಳಾದರೆ ಒಳ್ಳೆಯದು. ಇಲ್ಲವಾದಲ್ಲಿ ಬಾರದ ಹಣ ಮರಳಿ ಪಡೆಯಲು ಹೆಚ್ಚು ಸಮಯ ತಗಲುತ್ತದೆ. ಹಣ ಬರದಿದ್ದರೂ ರಶೀದಿ ಜೋಪಾನವಾಗಿ ಇಟ್ಟುಕೊಳ್ಳಿ. ಬ್ಯಾಂಕಿಗೆ ಹೋಗಿ ದೂರು ನೀಡಲು ಅದು ಬೇಕು.
- ಭದ್ರತಾ ಸಿಬ್ಬಂದಿ ಇಲ್ಲದ ಎಟಿಎಂ ಬಳಸಬೇಡಿ. ಏಕಾಂತ ಸ್ಥಳದಲ್ಲಿರುವ ಎಟಿಎಂ ಗೆ ಹೋಗುವಾಗ ಜತೆಗೆ ಇನ್ನೊಬ್ಬರನ್ನು ಕರೆದೊಯ್ಯಿರಿ.
- ಆನ್‌ಲೈನ್ ಬ್ಯಾಂಕಿಂಗ್ ಮಾಡುವವರು ಸೆಕ್ಯೂರ್ಡ್ ಆ್ಯಪ್‌ಗಳನ್ನು ಬಳಸಿ. ವಹಿವಾಟು

—ಹೀಗೆ ನೂರೆಂಟು ಪ್ರಶ್ನೆಗಳಿವೆ. ಈ ಪ್ರಶ್ನೆಗಳಿಗೆ ಉತ್ತರಿಸುವುದು ಅಷ್ಟು ಸುಲಭವಿಲ್ಲ. ಉದಾಹರಣೆಗೆ ಜನಧನ್ ಖಾತೆಯ ಅಪಯಶಸ್ಸನ್ನೂ ಗಮನಿಸಿ: ಇವತ್ತಿಗೂ ಶೇಕಡಾ 23ರಷ್ಟು ಜನಧನ್ ಖಾತೆಗಳಲ್ಲಿ ಶೂನ್ಯ ಉಳಿತಾಯ ಇದೆ ಎನ್ನುವುದು ಏನನ್ನು ಸೂಚಿಸುತ್ತದೆ? ಗ್ರಾಮಾಂತರ ಪ್ರದೇಶಗಳಲ್ಲಿ ಅಂತರ್ಜಾಲ ವಹಿವಾಟು ಬಿಡಿ, ನೆಟ್ಟಗೇ ಅರ್ಧ ದಿನ ವಿದ್ಯುತ್ ಪೂರೈಕೆಯೇ ಇರುವುದಿಲ್ಲ ಎನ್ನುವಾಗ, ಅಂತರ್ಜಾಲ ವಹಿವಾಟು ಎಷ್ಟರ ಮಟ್ಟಿಗೆ ಯಶಸ್ಸು ಪಡೆದೀತು?

ಬೆಳೆಯುತ್ತಿರುವ ಆರ್ಥಿಕತೆಯಲ್ಲಿ ಇಂತಹ ಸಮಸ್ಯೆಗಳು, ಪ್ರಶ್ನೆಗಳು ಇದ್ದೇ ಇರುತ್ತವೆ ಎನ್ನುವವರಿದ್ದಾರೆ. ಈಗ ಪ್ರಶ್ನೆಗಳನ್ನು ಕೇಳಿ ಉತ್ತರಕ್ಕಾಗಿ ಕಾಯುತ್ತಾ ಕೂರಲೂ ಸಮಯವಿಲ್ಲ. ಇಷ್ಟ ಇರಲಿ, ಬಿಡಲಿ– ಜನಸಾಮಾನ್ಯರು ಬ್ಯಾಂಕುಗಳ ಮುಂದೆ ಕ್ಯೂ ನಿಲ್ಲಲೇಬೇಕಿದೆ. ಸರ್ಕಾರ ಕೈಗೊಂಡ ನಿರ್ಧಾರದ ಸಾಧಕ– ಬಾಧಕಗಳನ್ನು ಬದಿಗಿಟ್ಟು ಬ್ಯಾಂಕ್ ಮೂಲಕವೇ ತಮ್ಮ ಎಲ್ಲ ಅರ್ಥ ಚಟುವಟಿಕೆಗಳನ್ನು ಮಾಡಲೇಬೇಕಿದೆ. ಪ್ಲಾಸ್ಟಿಕ್ ಹಣ ಮತ್ತು ಡಿಜಿಟಲ್ ಆರ್ಥಿಕತೆ ಈಗ ದೇಶದ ಮುಂದಿರುವ ಅನಿವಾರ್ಯತೆ. ಈ ವ್ಯವಸ್ಥೆಯನ್ನು ಹೆಚ್ಚು ಪರಿಣಾಮಕಾರಿಯಾಗಿ, ಆತಂಕಗಳಿಲ್ಲದೆ ಬಳಸಿಕೊಳ್ಳುವುದು ಹೇಗೆ ಎನ್ನುವುದು ಈಗ ಮುಖ್ಯ. ಡೆಬಿಟ್– ಕ್ರೆಡಿಟ್ ಕಾರ್ಡ್‌ಗಳ ಬಳಕೆ, ಮೊಬೈಲ್ ಬ್ಯಾಂಕಿಂಗ್, ಪಿಓಎಸ್ (ಪಾಯಿಂಟ್ ಆಫ್ ಸೇಲ್) ಸಾಧನದ ಮೂಲಕ ಪಾವತಿ– ಹೀಗೆ ವಿವಿಧ ರೀತಿಯಲ್ಲಿ ನಗದುರಹಿತ ವಹಿವಾಟಿನಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳಲೇಬೇಕಿದೆ. ನೋಟು ಅಮಾನ್ಯಗೊಂಡ ಎರಡೇ ದಿನಗಳಲ್ಲಿ ಪೇಟಿಎಂ ಕಂಪೆನಿಯ ವಹಿವಾಟು ಶೇಕಡಾ 700ರಷ್ಟು ಏರಿಕೆ ಕಂಡಿದೆ ಎಂದು ಆ ಕಂಪೆನಿಯ ಮಾಲೀಕರು ಪತ್ರಿಕಾ ಹೇಳಿಕೆ ನೀಡಿದರು. ಅಂದರೆ ಜನರು ಹೊಸ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವುದು ಅನಿವಾರ್ಯ ಎಂದೇ ಅರ್ಥ.

ಡಿಜಿಟಲ್ ವಹಿವಾಟಿಗೆ ಜಿಗಿಯುವುದಕ್ಕೆಂದೇ ಹಲವು ರಾಷ್ಟ್ರೀಕೃತ ಬ್ಯಾಂಕುಗಳು ಇದೀಗ ತಮ್ಮದೇ ಆದ ಮೊಬೈಲ್ ಆ್ಯಪ್‌ಗಳನ್ನು ಬಿಡುಗಡೆ ಮಾಡಿವೆ. ಮೊಬೈಲ್ ಮೂಲಕ ಸ್ವಯಂಚಾಲಿತ ಪಾವತಿ, ಹಣ ವರ್ಗಾವಣೆ, ಚೆಕ್‌ಗಳಿಗೆ ಆದೇಶ, ಚೆಕ್‌ನ ಫೋಟೋ ತೆಗೆದು ಕಳಿಸಿ ನೇರವಾಗಿ ಬ್ಯಾಂಕ್ ಖಾತೆಗೆ ಜಮಾ ಮಾಡುವುದು– ಹೀಗೆ ಈ ಆ್ಯಪ್‌ಗಳಲ್ಲಿ ಹತ್ತಾರು ಸೌಲಭ್ಯಗಳಿವೆ. ವಿದೇಶಗಳಲ್ಲಿ ಬಂದಿರುವ 'ಐಫೋನ್‌ನಲ್ಲಿ ಟಚ್ ಐ.ಡಿ ಸೌಲಭ್ಯ' ಶೀಘ್ರವೇ ನಮ್ಮಲ್ಲೂ ಬರಲಿದೆ. ನಮ್ಮಲ್ಲಿ ಬಹುತೇಕ ಆ್ಯಂಡ್ರಾಯ್ಡ್ ಫೋನ್‌ಗಳೇ ಜನಪ್ರಿಯ. ಈ ಫೋನ್‌ಗಳಲ್ಲಿ ಫಿಂಗರ್‌ಪ್ರಿಂಟ್ ಮೂಲಕದ ವಹಿವಾಟಿಗೆ ಭದ್ರತೆ ಒದಗಿಸುವ ತಂತ್ರಜ್ಞಾನವೂ ಬರುತ್ತಿದೆ. ಕೆಲವು ದೇಶಗಳಲ್ಲಿ ನಿಮ್ಮ ಫೋನ್ ಮೂಲಕ ಎಟಿಎಂ ಗಳಿಂದ ಹಣ ಡ್ರಾ ಮಾಡುವುದೂ ಸಾಧ್ಯವಾಗಿದೆ.

## ಹಣಕ್ಕೆ ಭದ್ರತೆ ಇದೆಯೆ?

ತಂತ್ರಜ್ಞಾನ ನಮ್ಮ ಆರ್ಥಿಕ ವಹಿವಾಟನ್ನು ಸರಳ ಹಾಗೂ